

## ಬೆಳದಿಂಗಳ ಸಂಗೀತ 195

**1 ಜನವರಿ 2018**

**ಗಾಯನ**

**ತ್ರಿಶೂರ್ ಬ್ರದರ್ಸ್**

ಶ್ರೀ ಕೃಷ್ಣ ಮೋಹನ್

ಮತ್ತು

ಶ್ರೀ ರಾಮ್‌ಕುಮಾರ್ ಮೋಹನ್

ಫೋನ್: 0821-2548220, 2548221
ಫ್ಯಾಕ್ಸ್: 0821-2548219, ಇಮೇಲ್: jssashram@yahoo.com

# ಶ್ರೀ ಸುತ್ತೂರು ಮಠ

ಮೈಸೂರು ಶಾಖೆ, ಚಾಮುಂಡಿ ಬೆಟ್ಟದ ತಪ್ಪಲು

# ಬೆಳದಿಂಗಳ ಸಂಗೀತ 194

**3 ಡಿಸೆಂಬರ್ 2017 * ಭಾನುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಕೊಳಲು–ಚಿತ್ರವೀಣಾ



ಕೊಳಲು

ವಿದುಷಿ ಶಾಂತಲಾ ಸುಬ್ರಹ್ಮಣ್ಯಂ



ಚಿತ್ರವೀಣಾ

ವಿದ್ವಾನ್ ವಿಶಾಲ್ ಆರ್. ಸಪೂರಂ



ಮೃದಂಗ

ವಿದ್ವಾನ್ ಕೆ.ಯು. ಜಯಚಂದ್ರರಾವ್

ವಿದ್ವಾನ್ ಅನಿರುದ್ಧ್ ಭಟ್

ಶ್ರೀಮತಿ ಶಾಂತಲಾ ಸುಬ್ರಹ್ಮಣ್ಯಂರವರು ಬೆಂಗಳೂರಿನಲ್ಲಿ ಹುಟ್ಟಿ, ಚೆನ್ನೈಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡವರು. ಬಾಲ್ಯದಲ್ಲಿ ತಂದೆ ಶ್ರೀ ಎಂ.ಎಸ್. ಸುಬ್ರಹ್ಮಣ್ಯಂರವರ ಬಳಿ, ಬಳಿಕ ಅಣ್ಣ ವಿದ್ವಾನ್ ಶಶಾಂಕ್‌ರವರ ಬಳಿ ಕೊಳಲು ಶಿಕ್ಷಣ ಮುಂದುವರಿಸಿದರು. ಪ್ರಸ್ತುತ ವಿದ್ವಾನ್ ಶ್ರೀ ಟಿ.ಎಸ್. ತ್ಯಾಗರಾಜನ್‌ರವರ ಬಳಿ ಹಾಡುಗಾರಿಕೆಯ ಸೂಕ್ಷ್ಮತೆಗಳನ್ನು ಕಲಿಯುತ್ತಿದ್ದಾರೆ. ಶ್ರೀಮತಿ ಶಾಂತಲಾರವರು ತಮ್ಮ ಸುಮಧುರ ಕಂಠಶ್ರೀ ಮತ್ತು ಅಸಾಧಾರಣ ಲಯಗಾರಿಕೆಗಳಿಂದಾಗಿ, ಸಂಪ್ರದಾಯಶುದ್ಧತೆ ಮತ್ತು ಪ್ರಯೋಗಶೀಲತೆಗಳಿಂದಾಗಿ ಕೇಳುಗರ ಹಾಗೂ ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಭಾರತದ ಬಹುತೇಕ ನಗರಗಳಲ್ಲದೆ ಅಮೆರಿಕ, ಕೆನಡ, ಇಂಗ್ಲೆಂಡ್, ಐರ್ಲೆಂಡ್, ಮಲೇಷ್ಯ ಮುಂತಾದ ರಾಷ್ಟ್ರಗಳ ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ವಾದನದ ಪ್ರಾವೀಣ್ಯವನ್ನು ಪ್ರಸ್ತುತಪಡಿಸಿದ್ದಾರೆ.

ಮೂರು ಜನಪ್ರಿಯ ಸಿ.ಡಿ. ಆಲ್ಬಂಗಳನ್ನು ಹೊರತಂದಿರುವ ವಿದುಷಿ ಶಾಂತಲಾರವರು ಒಬ್ಬ ಅಭಿಜಾತ ಗುರುಗಳೂ ಆಗಿದ್ದಾರೆ. ಸಾವಿರಾರು ಜನ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದಾರೆ.

ವಿದ್ವಾನ್ ವಿಶಾಲ್ ಆರ್. ಸಪೂರಂ ರವರು ಚಿತ್ರವೀಣಾ ವಾದನದಲ್ಲಿ ನಿಷ್ಣಾತರು, ಹಾಡುಗಾರಿಕೆಯಲ್ಲೂ ಪರಿಣತರು. ಶ್ರೀ ಎನ್. ರವಿಕಿರಣ್‌ರವರ ಬಳಿ ಇವರು ಚಿತ್ರವೀಣಾ ವಾದನವನ್ನು ಕರಗತ ಮಾಡಿಕೊಂಡಿದ್ದಾರೆ. ಒಂಬತ್ತನೆಯ ವಯಸ್ಸಿಗೇ ಮೊದಲನೆಯ ಸಂಗೀತ ಕಚೇರಿ ನಡೆಸಿಕೊಟ್ಟ ಹೆಗ್ಗಳಿಕೆ ಇವರದು. ದೇಶಾದ್ಯಂತ ಹಲವಾರು ನಗರಗಳಲ್ಲಿ ಕಾರ್ಯಕ್ರಮ ನೀಡಿ ಕೇಳುಗರ ಮನ ಸೂರೆಗೊಂಡಿದ್ದಾರೆ. ಇವರು ಅಮೆರಿಕದ ಆಸ್ಟಿನ್ ವಿಶ್ವವಿದ್ಯಾನಿಲಯದ ಪದವೀಧರರು. ಪ್ರತಿಷ್ಠಿತ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲೂ ಅಧ್ಯಯನ ಮಾಡಿದ್ದಾರೆ.

ವಿದ್ವಾನ್ ಕೆ.ಯು. ಜಯಚಂದ್ರರಾವ್‌ರವರು ಕಾರ್ಯಕ್ರಮದಲ್ಲಿ ಮೃದಂಗ ವಾದನದ ಸಹಕಾರ ನೀಡಲಿದ್ದಾರೆ. ಜೀವವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಜಯಚಂದ್ರರಾವ್ ಸಂಗೀತದ ಹಿನ್ನೆಲೆಯುಳ್ಳ ಕುಟುಂಬದಲ್ಲಿ ಜನಿಸಿದ್ದಾರೆ. ಇವರ ತಂದೆ ಪ್ರೊ. ಕೆ. ರಾಘವೇಂದ್ರರಾವ್ ಖ್ಯಾತ ಕೊಳಲುವಾದಕರು, ತಾಯಿ ಕೆ.ಆರ್. ಪ್ರೇಮಾ ರಾವ್ ವಯೊಲಿನ್ ವಾದಕರು.

ವಿದ್ವಾನ್ ಅನಿರುದ್ಧ್ ಭಟ್ ಅವರು ಮೃದಂಗದ ಶಿಕ್ಷಣವನ್ನು ವಿದ್ವಾನ್ ಎಂ.ವಿ. ಮೋಹನ್ ಮತ್ತು ವಿದ್ವಾನ್ ಕೆ.ಯು. ಬಾಲಚಂದ್ರರಾವ್ ಅವರಲ್ಲಿ ಪಡೆದರು. ಇವರು ಆಕಾಶವಾಣಿಯ ಬಿ.ಹೈ ಶ್ರೇಣಿಯ ಕಲಾವಿದರಾಗಿದ್ದು ಹಲವಾರು ಪ್ರಸಿದ್ಧ ಸಂಗೀತಗಾರರಿಗೆ ಸಾಥ್ ನೀಡಿದ್ದಾರೆ.

**ತಮಗೆ ಆದರದ ಸ್ವಾಗತ**